ಬಳಿ ಬಂದ ಸಂತೋಷ, 'ನಾವು ಕಾಡು ನೋಡಲು ಬಂದವರು ದಾರಿ ತಪ್ಪಿದ್ದೇವೆ, ಎಲ್ಲಾದರೂ ಮನೆ ಇರುವ ಕಡೆ ನಮ್ಮನ್ನ ತಲುಪಿಸುತ್ತೀಯಾ' ಎಂದು ನಾಗರಿಕತೆಯ ವಿನಯದಲ್ಲಿ ಕೋರಿದ. ವರ್ಷ, ಎರಡು ವರ್ಷಕ್ಕೆ ಹೀಗೆ ಕಾಡು ತಿರುಗಲು ಬಂದು, ದಿಕ್ಕು ತಪ್ಪಿದವರನ್ನು ನೋಡಿದ್ದ ಆ ಸ್ವರೂಪಿಗೆ ಅಂಥವರೇ ಇವರು ಅನಿಸಿರಬೇಕು. ಇಬ್ಬರ ಪಾದಗಳನ್ನು ದೃಷ್ಟಿಸಿ, ಮಾತನಾಡದೇ ಸನ್ನೆಯಲ್ಲಿ, 'ನನ್ನ ಹಿಂದೆ ಬನ್ನಿ' ಸೂಚಿಸಿ ಮುಂದೆ ಹೊರಟ.

ಸೇನೆಯಲ್ಲಿ ಸೇವೆ ಸಲ್ಲಿಸಿ ಬಂದಿದ್ದ ಸಂತೋಷನಿಗೆ ಚಿಕ್ಕಂದಿನಿಂದಲೇ ಪರಿಸರದ ಬಗ್ಗೆ ಆಸಕ್ತಿ. ಆ ಆಸಕ್ತಿಯನ್ನೇ ಬೆನ್ನುಹತ್ತಿಹೋಗಿದ್ದರೆ ಸಾಕಷ್ಟು ಅಧ್ಯಯನ ಮಾಡಿ, ಒಳ್ಳೆಯ ನೌಕರಿ ಹಿಡಿಯಬಹುದಿತ್ತು. ಒಂಥರಾ ವಿಚಿತ್ರ ಮನಃಸ್ಥಿತಿಯ ಆತನಿಗೆ ಅಕಡೆಮಿಕ್ ಆದ ಅಧ್ಯಯನದಲ್ಲಿ ಕಿಂಚಿತ್ತೂ ವಿಶ್ವಾಸವಿರಲಿಲ್ಲ. ಡಿಗ್ರಿವರೆಗೆ ಹೇಗೋ ದಾಟಿಕೊಂಡು ಬಂದವ ಅಪ್ಪ, ಅಮ್ಮ, ಅಣ್ಣಂದಿರಿಗೂ ತಿಳಿಸದೇ ಸೇನೆಗೆ ಸೇರಿಕೊಂಡಿದ್ದ. ತನ್ನ ಸೇವೆ ಮುಗಿಸಿ ಬಂದವ ಮತ್ತೇನೂ ಮಾಡದೇ ಸಾಕಷ್ಟು ದೊಡ್ಡ ಪಟ್ಟಣವೇ ಆದ ಶಿರಸಿಯಲ್ಲಿ ರೂಮ್ ಮಾಡಿಕೊಂಡು ಆರಾಮಾಗಿ ಓಡಾಡಿಕೊಂಡಿದ್ದ. ಪರಿಸರಕ್ಕೆ ಸಂಬಂಧಿಸಿದ ಎಲ್ಲ ಮಗ್ಗುಲುಗಳ ಬಗ್ಗೆಯೂ ಅವನಿಗೆ ಸೆಳೆತವಿದ್ದುದರಿಂದ ಆ ಬಗ್ಗೆ ಆಸಕ್ತಿ ಇದ್ದವರ ಒಡನಾಟ, ಆ ಕುರಿತಾದ ಪುಸ್ತಕ, ಪತ್ರಿಕೆಗಳ ಓದು ಅವನ ತಿಳಿವಳಿಕೆಯನ್ನು ಹೆಚ್ಚಿಸಿತ್ತು ಅನ್ನಬಹುದೇನೋ? ಮದುವೆ, ಮಕ್ಕಳು ಇಂಥ ಯಾವ ಉಪದ್ವ್ಯಾಪ ಇಲ್ಲದ್ದರಿಂದ ಕಾಡು ಸುತ್ತುವುದು ಬದುಕಿನ ಅವಿಭಾಜ್ಯ ಚಟುವಟಿಕೆಯಾಗಿತ್ತು. ಸುಮ್ಮನೆ ಕಾಡು ತಿರುಗಲೆಂದು ಹೋದವನು ಕಾಡುಪ್ರಾಣಿ, ಕಾಡಿನ ಹಣ್ಣುಗಳು, ಪಕ್ಷಿಗಳು, ಇನ್ನಿತರ ಜೀವಿಗಳ ಕುರಿತಾಗಿ ಇದುವರೆಗೆ ಲೋಕಕ್ಕೆ ಗೊತ್ತಿರದ ವಿಶೇಷತೆಯನ್ನು ಕಂಡುಕೊಂಡೇ ಬರುತ್ತಿದ್ದ. ಅವನ ವಯಸ್ಸಿಗೆ ಹೋಲಿಸಿದರೆ ಮನೀಷ ಇನ್ನೂ ಚಿಕ್ಕವ ಮತ್ತು ಎಳಸು. ಮನೀಷ ಪುಣೆಯ ಇನ್‌ಸ್ಟಿಟ್ಯೂಟ್‌ನಲ್ಲಿ ಫೋಟೊಗ್ರಫಿ ಅಧ್ಯಯನ ಮಾಡಿದ್ದ. ಆ ಅಂತರವಿದ್ದರೂ ಅಕಸ್ಮಾತಾಗಿ ಆದ ಪರಿಚಯ ಇಬ್ಬರಲ್ಲೂ ಕೇವಲ ವೃತ್ತಿಗೆ ಸಂಬಂಧಿಸಿರದ, ಈವರೆಗೆ ಅರಿವಿಗೆ ಬಾರದ ಯಾವುದೋ ನಂಟನ್ನು ಚಿಗುರಿಸಿತ್ತು. ಅವರಿಬ್ಬರೂ ಕೆಲವೊಮ್ಮೆ ಜಗಳ ಕಾದಿದ್ದೂ ಇತ್ತು. ಸಲಿಗೆ, ಸ್ನೇಹವಿದ್ದರೂ ಪ್ರಕೃತಿ ಮತ್ತು ಪರಿಸರದ ಕುರಿತು ಡಾಕ್ಯೂಮೆಂಟರಿ ಮಾಡುತ್ತಿದ್ದ ಮನೀಷ, ಸಂತೋಷನನ್ನು ತನ್ನ ಗುರುವೆಂದೇ ಭಾವಿಸುತ್ತಿದ್ದ.

ಆ ಅಕರಾಳ ಆಕೃತಿಯ ಬೆನ್ನ ಹಿಂದೆ ಹೊರಟ ಅವರಿಬ್ಬರಲ್ಲೂ ಸಣ್ಣದಾಗಿ ಭೀತಿ ಮೂಡತೊಡಗಿತು. ಗೊತ್ತಿಲ್ಲದ ಅನಾಮಿಕನ ಜೊತೆ ಸಂಕಷ್ಟದಿಂದ ಬಚಾವಾಗಲು ಹೊರಟಿದ್ದೇವಲ್ಲ, ಇದೂ ಅನರ್ಥಕ್ಕೆ ಎಡೆಮಾಡಿಕೊಟ್ಟರೆ? ಎಂದುಕೊಂಡ ಸಂತೋಷ ಅದನ್ನು ಸಣ್ಣದಾಗಿ ಮನೀಷನ ಬಳಿ ಹೇಳಲು ಹಿಂದೆ ತಿರುಗಿದ. ಅದೇ ಹೊತ್ತಿಗೆ ಮನೀಷನೂ ಏನೋ ಹೇಳಲೆಂದು ಬಾಯ್ತೆರೆದಿದ್ದ. ಅವನ ಕಣ್ಣಬಿಂಬದ ಭಾವ ಗುರುತಿಸಿದ ಸಂತೋಷ ಹೆದರಿಕೆ ಬೇಡ ಎಂದು ಸಂಜ್ಞೆ ಮಾಡಿದ. ಹಳ್ಳದ ಪಕ್ಕದ ಕಾಲಿಟ್ಟರೆ ಮೊಣಕಾಲ ತನಕ ಹುಗಿಯುವ ಜವುಗಿನಲ್ಲಿ ಪ್ರಯಾಸದಿಂದಲೇ ಹೆಜ್ಜೆ ಕಿತ್ತುಹಾಕುತ್ತ, ಎದೆಯೆತ್ತರಕ್ಕೆ ಬೆಳೆದ ಹುಲ್ಲುಗಳ ದೊರಗು ಅಂಚಿನ ಗರಿಗಳಿಂದ ಕೈ, ಮುಖ ಕೊರೆಸಿಕೊಳ್ಳುತ್ತ ಆ ಮಬ್ಬುಗತ್ತಲೆಯಲ್ಲಿ ಆ ಅಪರಿಚಿತನಿಗೆ ಬದುಕು, ಆಯುಷ್ಯ ಎಲ್ಲವನ್ನೂ ಒಪ್ಪಿಸಿಕೊಂಡವರಂತೆ ಅನೂಹ್ಯದೆಡೆಗೆ ಅವರು ಸಾಗುತ್ತಿದ್ದರು. ಆಯಾಸ, ಹಸಿವು, ವಿಹ್ವಲತೆಗಳಿಂದ ಮುಂದೊಂದು ಹೆಜ್ಜೆ ಇಡಲು ಅಶಕ್ತರಾಗಿದ್ದರೂ ಯಾವುದೋ ಸೆಳೆತವೆಂಬಂತೆ ಅವನ ಹಿಂದೆ ನಡೆದರು.

ಸ್ವಲ್ಪ ದೂರ ಹೋಗುತ್ತಿದ್ದಂತೆ ಎತ್ತರದ ಗುಡ್ಡದ ಮೇಲೆ ಸಣ್ಣದಾಗಿ ಬೆಂಕಿ ಜ್ವಲಿಸುವುದು ಕಂಡು ಸಂತೋಷ, ಮನೀಷರಿಬ್ಬರಿಗೂ ಒಮ್ಮೆಲೇ ಜೀವ ಬಂದಂತಾಯ್ತು. ಬೆಂಕಿ ಇದ್ದರೆ ಮನುಷ್ಯ ಇದ್ದ ಹಾಗೇ. ಅಂತೂ ಬಚಾವಾದೆವಲ್ಲ ಎನ್ನುವ ಸಮಾಧಾನದ ನಿಟ್ಟುಸಿರು ಬಿಟ್ಟರು. 'ಅಲ್ಲಿ ಬೆಂಕಿ ಕಾಣ್ತದಲ್ಲಾ, ಅಲ್ಲಿ ಮನೆ ಇದೆಯಾ?' ಎಂದು ಸಂತೋಷ ಆ ವ್ಯಕ್ತಿಯನ್ನು ಕೇಳಿದ. ಸಣ್ಣದಾಗಿ